# KALASAMBRAMA




ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಕಲಾ ಸಂಭ್ರಮ : 2022-23
ಕಲೆಯೇ ಬದುಕಿನ ಭಾವ ಲಹರಿ...
ಉದ್ಘಾಟನಾ ಸಮಾರಂಭ


















ವಿದ್ಯಾವರ್ಧಕ
ಕಲಾ
ದಿನಾಂಕ : 24-12-2022 ಶನಿವಾರ






ವಿದ್ಯಾವರ್ಧಕ ಸಂಘ (ರಿ). ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
570001
ಕಲಾ ಸಂಭ್ರಮ : 2022 –
ಉದ್ಘಾಟನಾ
ದಿನಾಂಕ : 24-12-2022 ಶನಿವಾರ










ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು – 570001


ವಿದ್ಯಾವರ್ಧಕ ಸಂಘ (ರಿ), ಮೈಸೂರು


ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು


















ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ
ಕಲಾ ಸಂಭ್ರಮ : 20




24-12-2022

















# ಕಾರ್ಯಕ್ರಮದ ವರದಿ

**“ಮನುಷ್ಯನ ಜೀವನಕ್ಕೆ ಕಲೆಯೇ ಆಸರೆ.”**

**- ಶ್ರೀ.ಡಿ.ಉದಯ್ ಕುಮಾರ್, ಕೆ.ಇ.ಎಸ್**

ಮಾನವನ ಒಳಿತಿಗಾಗಿ ಇರುವ ಅಧ್ಯಯನವೇ ಕಲೆ. ಅದು ಬದುಕನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತದೆ. ಪದವಿ ಎಂದರೆ ಕೇವಲ ಅಧ್ಯಯನವಲ್ಲ ಅದು ಪ್ರಬುದ್ಧತೆ. ಮನುಷ್ಯನಲ್ಲಿ ಶಿಕ್ಷಣ ಈ ಪ್ರಬುದ್ಧತೆಯನ್ನು ಬೆಳೆಸುತ್ತದೆ. ಬದುಕಿನ ಜ್ಞಾನ ನಮ್ಮಲ್ಲಿ ಅಂತರ್ಗತವಾಗಬೇಕಾದರೆ ಕಲೆಯೆಂಬುದು ಬಹು ಮುಖ್ಯ ನಮ್ಮಲ್ಲಿ ಪ್ರತಿಭೆಗಳಿರುತ್ತವೆ. ಆ ಪ್ರತಿಭೆ ಕಲೆಯಾಗಿ ರೂಪುಗೊಳ್ಳುತ್ತದೆ. ಕಲೆಯೆಂಬುದು ಸಂಗೀತ, ಸಾಹಿತ್ಯ, ಕ್ರೀಡೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡುತ್ತದೆ ಹಾಗಾಗಿ ಕಲೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕ, ಮೈಸೂರು ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಯವರಾದ ಶ್ರೀ.ಡಿ.ಉದಯ್ ಕುಮಾರ್ ಅವರು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ “ಕಲಾಸಂಭ್ರಮ 2022–23” ಕಲೆಯೇ ಬದುಕಿನ ಭಾವಲಹರಿ ಎನ್ನುವ ಕಾರ್ಯಕ್ರಮವನ್ನು ಹಣತೆಯನ್ನು ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್ ಪರೀಕ್ಷೆಗಳಲ್ಲಿ ಶೇ. 75% ಭಾಗ ಆಯ್ಕೆಯಾಗಿರುವ ಅಧಿಕಾರಿಗಳು ಕಲಾ ವಿಭಾಗದವರು. ಇಂದು ವಿದ್ಯಾರ್ಥಿಗಳಲ್ಲಿ ಅಧ್ಯಯನದ ಆಸಕ್ತಿ ಕಡಿಮೆಯಾಗುತ್ತಿದೆ, ಅವರು ಬರವಣಿಗೆಯನ್ನು ರೂಢಿಸಿಕೊಳ್ಳಬೇಕು, ಅಧ್ಯಯನಶೀಲರಾಗಬೇಕು, ಕಲೆ ಎಂದರೆ ಒಂದು ರೀತಿ ಬರವಣಿಯನ್ನು ರೂಢಿಸಿಕೊಳ್ಳುವುದೇ ಆಗಿದೆ. ಕಲೆಯು ವೈಶಾಲ್ಯತೆಯನ್ನು ಬೆಳೆಸುತ್ತದೆ. ವಿದ್ಯಾರ್ಥಿಗಳಿಗೆ ಸಮಯದ ಸದುಪಯೋಗವನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದನ್ನು ಕಲಿಸುವ ಜೊತೆಗೆ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುತ್ತದೆ ಕಲೆ. ಮೈಸೂರು ಸಾಂಸ್ಕೃತಿಕ ನಗರಿ ಈ ಕಲಾ ಸಂಭ್ರಮ ಕಾರ್ಯಕ್ರಮವು ಅದಕ್ಕೆ ಬೆಳ್ಳಿ ಕಿರೀಟವಿದ್ದಂತೆ. ಇಂದಿನ ಕಲಾ ಸಂಭ್ರಮದ ಚರ್ಚಾಸ್ಪರ್ಧೆಯ ವಿಷಯವಾದ “ಏಕರೂಪ ನಾಗರೀಕ ಕಾಯ್ದೆ ಜಾರಿಯಿಂದ ಮಾತ್ರ ದೇಶದ ಸಮಗ್ರತೆ ಸಾಧ್ಯ” ಎಂಬುದು ಇಂದು ಪ್ರಸ್ತುತವಾಗಿದೆ ಎಂದು ಮೆಚ್ಚುಗೆಯ ಮಾತುಗಳನ್ನು ಆಡಿದರು. ಕಲಾ ಸಂಭ್ರಮ 2022–23 ಕಾರ್ಯಕ್ರಮದ ಜೊತೆಗೆ ಕಾಲೇಜಿನ ವಾರ್ಷಿಕ ಸಂಚಿಕೆ “ಸೌಗಂಧಿಕ 2021–22” ಅನ್ನು ಸಹ ಈ ಸಮಯದಲ್ಲಿ ಬಿಡುಗಡೆಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷರಾದ ಶ್ರೀ.ಗುಂಡಪ್ಪಗೌಡರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಥೆ ಬೆಳೆದು ಬಂದ ಬಗೆಯನ್ನು ತಿಳಿಸುವುದರ ಜೊತೆಗೆ ಕಲಾ ಸಂಭ್ರಮ ಕಾರ್ಯಕ್ರಮದ ಮಹತ್ವವನ್ನು ತಿಳಿಸಿಕೊಟ್ಟು ವಿದ್ಯಾರ್ಥಿಗಳು ಚರ್ಚಾಸ್ಪರ್ಧೆಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿ ಮಾತನಾಡುವುದನ್ನು ರೂಢಿಸಿಕೊಳ್ಳಬೇಕು, ಕೇವಲ ಅಂಕವನ್ನು ಪಡೆದ ಮಾತ್ರಕ್ಕೆ ಉತ್ತಮ ವಿದ್ಯಾರ್ಥಿಯಾಗುವುದಿಲ್ಲ ಹೊರ ಪ್ರಪಂಚದ ಜೊತೆ ಬೆರೆಯುವುದನ್ನು ಕಲಿಯಬೇಕು ಎಂದರು. ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಶ್ರೀ.ಪಿ.ವಿಶ್ವನಾಥ್ ಅವರು ತಮ್ಮ ಮುಖ್ಯ ಅತಿಥಿಗಳ ನುಡಿಯಲ್ಲಿ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಉತ್ತಮ ಪ್ರಜೆಗಳಾಗಿ ರೂಪಿಸಿಕೊಳ್ಳಲು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮಲ್ಲಿರುವ

ಸುಪ್ತಪ್ರತಿಭೆಗಳನ್ನು ಹೊರಹಾಕುವ ಮುಖೇಣ ಪ್ರತಿಭಾವಂತರಾಗಬೇಕು ಎಂದು ಕಿವಿಮಾತು ಹೇಳಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್. ಮರೀಗೌಡರವರು ಕಲಾಸಂಭ್ರಮದ ಧ್ಯೇಯೋದ್ದೇಶಗಳನ್ನು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆ ಹಾಗೂ ಭಾವಗೀತೆ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ರಾಜ್ಯಾದ್ಯಂತ ಸುಮಾರು 35 ರಿಂದ 40 ಕಾಲೇಜುಗಳ ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು. ಸಂಸ್ಥೆಯ ಗೌರವ ಕೋಶಾಧ್ಯಕ್ಷರಾದ ಶ್ರೀ. ಶ್ರೀಶೈಲರಾಮಣ್ಣವರ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕು.ಸೌಮ್ಯ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಕಲಾಸಂಭ್ರಮದ ಸಂಚಾಲಕರಾದ ಡಾ.ವೆಂಕಟೇಶ.ಟಿ.ಕೆ ಸ್ವಾಗತಿಸಿದರೆ, ಮತ್ತೊಬ್ಬ ಸಂಚಾಲಕರಾದ ಪ್ರೊ.ಸಿ.ಎಂ.ನಂದೀಶ್ ವಂದಿಸಿ ಡಾ.ಶ್ರೀನಿವಾಸ.ಟಿ. ಕಾರ್ಯಕ್ರಮವನ್ನು ನಿರೂಪಿಸಿದರು.

# ರಾಜ್ಯ ಮಟ್ಟದ ಅಂತರ ಕಾಲೇಜು ಚರ್ಚಾಸ್ಪರ್ಧೆ

ಸಮಯ : ಬೆಳಗ್ಗೆ 10.00 ಗಂಟೆಗೆ

ಅಧ್ಯಕ್ಷತೆ : **ಡಾ. ಎನ್.ಆರ್. ಚಂದ್ರೇಗೌಡ**
ಸಂಯೋಜನಾಧಿಕಾರಿಗಳು,
ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,
ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು

ತೀರ್ಪುಗಾರರು : **ಶ್ರೀ ಪುಟ್ಟಶೆಟ್ಟಿ**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು
ಹಾಗೂ ಅಧ್ಯಕ್ಷರು, **MUETA**

**ಡಾ. ನೀ.ಗೂ. ರಮೇಶ್**
ಲೇಖಕರು ಹಾಗೂ ಪ್ರಭಾರ ಪ್ರಾಂಶುಪಾಲರು
ಸರ್ಕಾರಿ ಪದವಿಪೂರ್ವ ಕಾಲೇಜು, ಹಾರನಹಳ್ಳಿ
ಪಿರಿಯಾಪಟ್ಟಣ ತಾಲ್ಲೂಕು

**ಶ್ರೀ ಕುಮಾರಸ್ವಾಮಿ**
ಉಪನ್ಯಾಸಕರು, ವಿದ್ಯೋದಯ ಪದವಿಪೂರ್ವ ಕಾಲೇಜು,
ಟಿ. ನರಸೀಪುರ

ವಿದ್ಯಾವರ್ಧಕ ಸಂಘ (ರಿ.), ಮೈಸೂರು

# ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು – 570001

# ಕಲಾ ಸಂಭ್ರಮ 2022–23

## ರಾಜ್ಯ ಮಟ್ಟದ ಅಂತರ ಕಾಲೇಜುಗಳ ಕಲಾ ಉತ್ಸವ

**ದಿನಾಂಕ : 24–12–2022 ಶನಿವಾರ**

**ಸ್ಪರ್ಧೆಗಳು :**

**ಚರ್ಚಾಸ್ಪರ್ಧೆ ವಿಷಯ :** "ಏಕರೂಪ ನಾಗರೀಕ ಕಾಯ್ದೆ ಜಾರಿಯಿಂದ ಮಾತ್ರ ದೇಶದ ಸಮಗ್ರತೆ ಸಾಧ್ಯ"
ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು (ಒಬ್ಬರು ಪರ ಹಾಗೂ ಮತ್ತೊಬ್ಬರು ವಿರೋಧ)



**ಭಾವಗೀತೆ ಗಾಯನ ಸ್ಪರ್ಧೆ :** (ಇಬ್ಬರು ಸ್ಪರ್ಧಿಗಳು ಭಾಗವಹಿಸುವುದು)
ಸಮಯ : ಪೂರ್ವಾಹ್ನ 11.00 ಗಂಟೆಗೆ



ಈ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ಹಾಗೂ
ಪ್ರಥಮ ಸ್ಥಾನಕ್ಕೆ ರೂ 5000/- ದ್ವಿತೀಯ ಸ್ಥಾನಕ್ಕೆ ರೂ 3000/-
ತೃತೀಯ ಸ್ಥಾನಕ್ಕೆ ರೂ 2000/- ನಗದು ಬಹುಮಾನ ನೀಡಲಾಗುವುದು

**ಸೂಚನೆಗಳು**

1. ಚರ್ಚಾ ಸ್ಪರ್ಧೆಯಲ್ಲಿ ಇಬ್ಬರು ಸ್ಪರ್ಧಿಗಳನ್ನೊಳಗೊಂಡ ಪ್ರತಿ ತಂಡಕ್ಕೆ ರೂ 100 ನೋಂದಣಿ ಶುಲ್ಕವಿರುತ್ತದೆ.
2. ಭಾವಗೀತೆ ಗಾಯನ ಸ್ಪರ್ಧೆಗೆ ರೂ 100 ನೋಂದಣಿ ಶುಲ್ಕವಿರುತ್ತದೆ.
3. ವಿದ್ಯಾರ್ಥಿಗಳು ತಮ್ಮ ಕಾಲೇಜಿನಿಂದ ಅನುಮತಿ ಪತ್ರ ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
4. ದಿನಾಂಕ 24–12–2022ನೇ ಶನಿವಾರ ಬೆಳಿಗ್ಗೆ 9–00 ಗಂಟೆಯೊಳಗೆ ನೋಂದಣಿ ಮಾಡಿಕೊಳ್ಳತಕ್ಕದ್ದು.

| ಡಾ. ವೆಂಕಟೇಶ್ ಟಿ.ಕೆ. | ಪ್ರೊ. ನಂದೀಶ್ ಸಿ.ಎಂ. | ಪ್ರೊ. ಸತೀಶ್ ಟಿ. |
|---|---|---|
| ಸಂಚಾಲಕರು | ಸಂಚಾಲಕರು | ಅಧ್ಯಾಪಕ ಸಲಹೆಗಾರರು |
| ಮೊ : 9964707145 | ಮೊ : 9342836247 | ಮೊ : 9343252694 |



ವಿದ್ಯಾರ್ಥಿ ಸಂಚಾಲಕರು :
ದರ್ಶನ್ ಪಿ. । ಸಾಗರ್ । ಮಂಜೇಶ್ । ವಿನೋದ್ ಪ್ರಸಾದ್ । ಅನುಷಾ ।
ಧನುಶ್ ಆರ್ । ಶಮಿತಾಗೌಡ । ಪ್ರಿಯಾಂಕ । ಯಶಸ್ ಡಿ.ವೈ । ಶಿವಾನಿ । ಅಭಿ
ಭೂಮಿಕಾ । ನಿಸರ್ಗ । ವರ್ಷಿಣಿ । ಮನೋಜ್ ಕುಮಾರ್ । ಸಂದೀಪ್ । ಜಾಹ್ನವಿ
ಮಹೇಶ್ । ವಿಷ್ಣು । ಗಣೇಶ್ ಗೌಡ । ಚಿರಂಜೀವಿ ಗೌಡ । ಸಂದೀಪ್ । ಸಂಧ್ಯಾ































































# ರಾಜ್ಯ ಮಟ್ಟದ ಅಂತರ ಕಾಲೇಜುಗಳ ಭಾವಗೀತೆ ಗಾಯನ ಸ್ಪರ್ಧೆ

ಸಮಯ : ಮಧ್ಯಾಹ್ನ 2.00 ಗಂಟೆಗೆ

ಅಧ್ಯಕ್ಷತೆ : ಕರ್ನಾಟಕ ಕಲಾಶ್ರೀ **ಡಾ. ಕೆ. ಕುಮಾರ್**
ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು
ಮಾನಸಗಂಗೋತ್ರಿ, ಮೈಸೂರು

ತೀರ್ಪುಗಾರರು : **ಶ್ರೀಮತಿ ವಿದೂಷಿ ರಶ್ಮಿ ಚಿಕ್ಕಮಗಳೂರು**
ಸುಗಮ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಕಲಾವಿದರು, ಮೈಸೂರು

**ಶ್ರೀಮತಿ ವಿದೂಷಿ ವಾಸವಿ**
ಸುಗಮ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಕಲಾವಿದರು, ಮೈಸೂರು

**ಶ್ರೀ ವಿದ್ವಾನ್ ಹರೀಶ್ ಪಾಂಡವ್**
ಪ್ರಸಿದ್ಧ ಸ್ಯಾಕ್ಸೋಫೋನ್ ವಾದಕರು, ಮೈಸೂರು




































ಕಲಾ ಸಂಜೆ : ಸಾಂಸ್ಕೃತಿಕ ಕಾರ್ಯಕ್ರಮ

ಸಮಯ : ಸಂಜೆ 6.00 ಗಂಟೆಗೆ

ಉದ್ಘಾಟಕರು : ಬಿಗ್‌ಬಾಸ್ ಓ.ಟಿ.ಟಿ. ಖ್ಯಾತಿಯ **ಅರ್ಜುನ್ ರಮೇಶ್**
ನಟರು, ಟಿ. ನರಸೀಪುರ

ಮುಖ್ಯ ಅತಿಥಿಗಳು : **ಡಾ. ಹೆಚ್.ವಿ. ಕೃಷ್ಣಸ್ವಾಮಿ**
ನಿವೃತ್ತ ಪ್ರಧಾನ ವ್ಯವಸ್ಥಾಪಕರು, ಕೆ.ಎಸ್.ಎಫ್.ಸಿ.
ಹಾಗೂ ಸಮಾಜ ಸೇವಕರು, ಹೆಚ್.ಡಿ. ಕೋಟೆ ತಾಲ್ಲೂಕು

